ಸಂತೆ ಇಂದು. ಎಲ್ಲ ಕಾಳು ಬಹಳ ತುಟ್ಟಿಯಾಗಿರುವುವು. ಸಂಸಾರವನ್ನು ಹೇಗೆ ಸಾಗಿಸಬೇಕು?

ಲೋಕಸೇವೆಗೋಸುಗ ಉಡುಬುಡು ಮಾಡುವ ಆವಶ್ಯಕತೆಯಿಲ್ಲ, ಶುಚಿತ್ವದಲ್ಲಿ ಶಕ್ತಿಯುಂಟು. ಶಕ್ತಿ ಕಾರ್ಯ ಮಾಡದೆ ಇರದು. ಶುಚಿಯಾಗಿರಲು ಯತ್ನಿಸುತ್ತಿರು, ರಾಮಚಂದ್ರಾ!

**10-12-41 ರಾತ್ರಿ 9.20**

ಮನೆಗೆ ಇಂದು ಮತ್ತೆ ನಾಲ್ಕು ಬಾಗಿಲ ಚೌಕಟ್ಟುಗಳನ್ನು ಕೂಡಿಸಿದರು. ಬಾವಿಯ ಕೆಲಸ ಇಂದು ಆಗಿಲ್ಲ. ಶ್ರೀಮತಿ ಮೊಕಾಶಿ ಸೀತಾಬಾಯಿಯವರಿಗೆ ಮುಂಗಡವಾಗಿ ಮತ್ತೆ ಒಂದು ನೂರು ರೂ.ಗಳನ್ನು ಕೊಟ್ಟೆನು.

ಪಾಂಡುರಂಗರಾಯರು ಭಾಷಣವನ್ನು ಓದಿದರು. ಅಲ್ಲಿ ಇಲ್ಲಿ ಸುಧಾರಣೆಗಳನ್ನು ಸೂಚಿಸಿದರು.

ಎರಡನೆಯವರು ತಮ್ಮ ಆಚರಣೆಯಲ್ಲಿ ತಪ್ಪಿದರೆ ನಾನೇಕೆ ತಪ್ಪಬೇಕು? ಅವರು ನನ್ನನ್ನು ವಂಚಿಸುವರೆಂದು ನಾನೇಕೆ ಅವರನ್ನು ವಂಚಿಸಲು ಮನಸ್ಸು ಮಾಡಬೇಕು? ಅವರಂತೆ ನಾನೂ ಆಚರಿಸಿದರೆ ಅವರಿಗೂ ನನಗೂ ಭೇದವೆಲ್ಲಿ?

**11-12-41 ರಾತ್ರಿ 10ಗಂಟೆ**

ಹರ್ಡೇಕರ ಮಂಜಪ್ಪನವರಿಂದ ಮತ್ತೆ ಪತ್ರವು ಬಂದಿದೆ. ನನ್ನ ಅಂತಃಕರಣವು ಅವರಿಗೆ ಗೊತ್ತಾಗಲಿಲ್ಲ. ವಕ್ರನೀತಿಯನ್ನು ಅನುಸರಿಸಿದರೆಂದು ದುಃಖದಿಂದ ಹೇಳಬೇಕಾಗುತ್ತದೆ. ದೇವಾ, ನನ್ನ ಕನ್ನಡ ನಾಡಿಗೆ ಕೃಪೆದೋರು.

ಭಾಷಣವನ್ನು ಪಾಂಡುರಂಗರಾಯರು ಸಂಸ್ಕಾರ ಗೊಳಿಸಿದರು.

ಸತ್ಯವೆ, ನನ್ನ ಕೈಯನ್ನು ಹಿಡಿ. ನಿನ್ನ ಆಧಾರವೆ ಆಧಾರವು. ಉಳಿದುದು ಹುಳು ಮೇದ ಬಿದಿರು!

**13-12-41 ರಾತ್ರಿ 8.45**

ನಿನ್ನೆ ರಾತ್ರಿ ಕಬ್ಬೂರನಲ್ಲಿ ಹೋಗಿದ್ದೆನು. ತಿರುಗಿ ಬರಲು ರಾತ್ರಿ ಬಹಳವಾಯ್ತು.

ಲಿಂಗಾಯತ ವಿದ್ಯಾಭಿವೃದ್ಧಿ ಸಮಿತಿಯವರಿಂದ ಪತ್ರ ಬಂದಿದೆ. ಅದಕ್ಕೆ ನನ್ನ ಉತ್ತರ ಸಿದ್ಧವಾಗಿದೆ. ಮಿತ್ರರಿಗೆ ತೋರಿಸಬೇಕು.

ಬಾವಿಗೆ ವಜ್ರದುಂಡಿ ಕಲ್ಲು ಬಂದಿದೆ. ಇನ್ನೂ ನೀರು ಎಂದು ಬರುವುದೊ!

ಶ್ರೀ ಕೃಷ್ಣಮಾಚಾರ್ಲು ಅವರು ಇಂದು ನನ್ನಲ್ಲಿ ಊಟಕ್ಕೆ ಆಮಂತ್ರಿತರಾಗಿದ್ದರು. ಊಟವಾದ ಬಳಿಕ ಎಲ್ಲಮ್ಮನ ಗುಡ್ಡಕ್ಕೆ ಹೋಗಿಬಂದರು.

ಭಾಷಣವು ಸಿದ್ಧವಾಗಿದೆ. ಅಚ್ಚಿಗೆ ಕೊಡಬೇಕು.

ಲಿಂಗಾಯತರ ಮನೋವೃತ್ತಿ ನನ್ನನ್ನು ಪೀಡಿಸುತ್ತದೆ. ಜಾತಿದ್ವೇಷವನ್ನು ನನ್ನಲ್ಲಿ ಕಾಣುತ್ತಿರುವರು! ನನ್ನ ಹೃದಯವನ್ನು ತೆರೆದಿಟ್ಟದ್ದೇನೆ. ಆದರೂ ಅಪಾರ್ಥವನ್ನು ಮಾಡಿಕೊಂಡು ಕೆಸರನ್ನೆರಚಲು ಬಗೆಯುತ್ತಾರೆ. ದುರ್ದೈವವು! ಶ್ರೀಹರಿ, ಶಾಂತಿಯ ಮಾರ್ಗದಿಂದ ನನ್ನನ್ನು ಕದಲಿಸಬೇಡ, ತಂದೆ.

**14-12-41 ರಾತ್ರಿ 8.55**

ಕಾಳುಕಡಿಗಳು ತುಟ್ಟಿಯಾಗುತ್ತಿವೆ. ಉಳಿದ ವಸ್ತುಗಳ ಬೆಲೆಯೂ ಏರುತ್ತಲಿದೆ. ಯುದ್ಧದ ಪರಿಣಾಮವು! ಯುದ್ಧವು ನಮ್ಮ ಬಾಗಿಲಿಗೇ ಬಂದಿದೆ. ಬ್ರಹ್ಮದೇಶದಲ್ಲಿ ಬಾಂಬುಗಳನ್ನು ಚೆಲ್ಲಿದರಂತೆ ಜಪಾನಿಗಳು. ಮನುಷ್ಯನ ಜೀವವು ಹುಲ್ಲಿಗಿಂತ ಕಡಿಮೆಯೆ? ಬ್ರಹ್ಮದೇಶದವರು ಜಪಾನಿಗಳ ಶತ್ರುಗಳಲ್ಲ. ಆದರೇನು. ಬ್ರಿಟಿಶರು ಹಿಂದುಸ್ತಾನವನ್ನೂ ಬ್ರಹ್ಮದೇಶವನ್ನೂ ಯುದ್ಧದಲ್ಲಿ ನೂಕಿರುವರಲ್ಲವೆ? ದುರ್ದೈವವು!

ನಾಳಿನಿಂದ ಕಟ್ಟಡದ ಕೆಲಸವು ಮತ್ತೆ ನಡೆಯ ಬಹುದು. ಎರಡನೆಯವರ ಕೈಯಲ್ಲಿಯ ಮಾತು! ಹೇಗೊ ನಡೆದಿದೆ.

ಕಬ್ಬೂರ ನಾರಾಯಣನು ನಾನು ಲಿಂಗಾಯತ ಸಮಿತಿಯವರಿಗೆ ಬರೆದ ಉತ್ತರವನ್ನು ಓದಿದನು. ಶ್ರೀ ಪೂಜಾರ ಅವರೂ ನೋಡಿದರು. ನಾನು ಬರೆದುದರಲ್ಲಿ ಎರಡುಮೂರು ಮಾತುಗಳು ಅನಾವಶ್ಯಕವೆಂದು ಅವರ ಅಭಿಪ್ರಾಯವು. ಅವರ ಸೂಚನೆಯಂತೆ ತಿದ್ದಿದ್ದೇನೆ ನಾಳೆ ಕಳಿಸುವೆನು.

ಈಗ ನಡೆದ ಜಾಗತಿಕ ಯುದ್ಧವು ನಿಲ್ಲುವುದೆಂದು? ಮನುಷ್ಯಸಂಹಾರಕ್ಕೆ ಮಿತಿಯಿಲ್ಲದಾಗಿದೆ. ಮನುಷ್ಯನು ಮನುಷ್ಯನಾಗುವನೆಂದು? ಕ್ರೌರ್ಯದ ಪರಮಾವಧಿಯಾಯ್ತು. ಶ್ರೀಹರಿ, ಜಗಕ್ಕೆ ಶಾಂತಿಯನ್ನು ದಯೆಪಾಲಿಸು, ತಂದೆ!